# ಕರ್ನಾಟಕ ವಿಧಾನ ಪರಿಷತ್ತು.

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1268 |
| ಸದಸ್ಯರ ಹೆಸರು | : | ಶ್ರೀ ಕೆ.ಟಿ. ಶ್ರೀ ಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08.03.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು. |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಂಡ್ಯದ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ವಿವೇಕಾನಂದ ಬಡಾವಣೆಯನ್ನು ಯಾವಾಗ ನಿರ್ಮಿಸಲಾಗಿದೆ; (ವಿವರ ನೀಡುವುದು) | ಮಂಡ್ಯ ನಗರದಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಿರುವ ವಿವೇಕಾನಂದನಗರ ಬಡಾವಣೆಯನ್ನು 1998-99ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ. |
| ಆ | ಈ ಬಡಾವಣೆಯಲ್ಲಿ ಎಷ್ಟು ನಿವೇಶನವನ್ನು ಹಂಚಿಕೆ ಮಾಡಲಾಗಿದೆ; (ವಿವರ ನೀಡುವುದು) | ಮಂಡ್ಯ ನಗರದ ವಿವೇಕಾನಂದ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಿವೇಶನಗಳ ವಿವರವನ್ನು **ಅನುಬಂಧ-1**ರಲ್ಲಿರಿಸಿದೆ. |
| ಇ | ಈ ಬಡಾವಣೆಯಲ್ಲಿ ರಸ್ತೆ ಚರಂಡಿಯಂತಹ ಅಗತ್ಯ ಮೂಲಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಈ | ಬಂದಿದ್ದಲ್ಲಿ, ಮೂಲಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ನಅಇ/370/ಮೈಅಪ್ರಾ/2016 ದಿನಾಂಕ: 23.09.2020 ರಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಿವೇಕಾನಂದ ನಗರ ಬಡಾವಣೆಗೆ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಕಲ್ಪಿಸುವ ಒಟ್ಟು ರೂ.16.46 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.<br><br>ಇದರಲ್ಲಿ ಕ್ರಮವಾಗಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ರೂ. 4.57 ಕೋಟಿ ಹಾಗೂ ಒಳಚರಂಡಿ ಕಾಮಗಾರಿಗೆ ರೂ.11.89 ಕೋಟಿಗಳ ಕಾಮಗಾರಿಯನ್ನು ಠೇವಣಿ ಕೊಡುಗೆ ಆಧಾರ ಮೇಲೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯ ವಿಭಾಗದ ವತಿಯಿಂದ ಕೈಗೊಳ್ಳಲು ವಹಿಸಲಾಗಿರುತ್ತದೆ. ದಿನಾಂಕ: 26-06-2021ರ ವರೆಗೆ ರೂ.8.23 ಕೋಟಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಠೇವಣಿಕರಿಸಲಾಗಿದೆ. |

| | | |
|---|---|---|
| | | ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು ರವರು ದಿನಾಂಕ: 13.09.2021 ರಲ್ಲಿ ಸದರಿ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ ಮತ್ತು ಮುಖ್ಯ ಅಭಿಯಂತರರು ದಿನಾಂಕ:01-10-2021 ರಲ್ಲಿ ಟೆಂಡರ್ ಆಹ್ವಾನಿಸಿದ್ದು, ದಿನಾಂಕ:01-01-2022 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, ಟೆಂಡರ್ ಮೌಲ್ಯಮಾಪನ ಪ್ರಗತಿಯಲ್ಲಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |

ಸಂಖ್ಯೆ: ನಅಇ 96 ಮೈಅಪ್ರಾ 2022 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**

ಅನುಬಂಧ-1

## ವಿವೇಕಾನಂದ ನಗರ ಬಡಾವಣೆ

| ಕ್ರ ಸ | ನಿರ್ಮಿಸಿದ ಬಡಾವಣೆಯ ಹೆಸರು ಮತ್ತು ವರ್ಷ | ಬಡಾವಣೆಯಲ್ಲಿ ನಿರ್ಮಿಸಿದ ಒಟ್ಟು ನಿವೇಶನಗಳ ಸಂಖ್ಯೆ | ಬಡಾವಣೆಯಲ್ಲಿ ಹಂಚಿಕೆ ಮಾಡಿದ ಒಟ್ಟು ನಿವೇಶನಗಳ ಸಂಖ್ಯೆ | ಬಡಾವಣೆಯಲ್ಲಿ ಹಂಚಿಕೆ ಯಾಗದೇ ಉಳಿದಿರುವ ಒಟ್ಟು ಖಾಲಿ ನಿವೇಶನಗಳ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | ವಿವೇಕಾನಂದ ನಗರ ಬಡಾವಣೆ 1998 ರಂದು ರಚಿಸಲಾಗಿದೆ.<br><br>ಮಂಡ್ಯ ಗ್ರಾಮದ ಸ.ನಂ.507 230ಎಕರೆ 11ಗುಂಟೆ | ಮಧ್ಯಂತರ = 2299 | ಮಧ್ಯಂತರ = 2265 | ಮಧ್ಯಂತರ = 34 |
| | | ಮೂಲೆ= 349 | ಮೂಲೆ= 94 | ಮೂಲೆ= 255 |
| | | ವಾಣಿಜ್ಯ=142 | ವಾಣಿಜ್ಯ = 28 | ವಾಣಿಜ್ಯ= 114 |
| | | ನಾಗರೀಕ ಸೌಲಭ್ಯ = 58 | ನಾಗರೀಕ ಸೌಲಭ್ಯ = 41 | ನಾಗರೀಕ ಸೌಲಭ್ಯ = 17 |
| | | ಒಟ್ಟು = 2848 | ಒಟ್ಟು= 2428 | ಒಟ್ಟು=420 |

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ಮಂಡ್ಯ.